# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾಲೂರಿನ ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ನರ್ಸಿಂಗ್ ಹೆಸರನ್ನು ಮಾನಸ ನರ್ಸಿಂಗ್ ಕಾಲೇಜ್ ಎಂದು ಮರುನಾಮಕರಣ.

---------

**ಓದಲಾಗಿದೆ:**

೧) ದಿನಾಂಕ: ೧೨.೧೨.೨೦೦೩ ಸಂ: ಆಕುಕ ೩೮೮ ಎಂಪಿಎಸ್ ೨೦೦೩ರ ಸರ್ಕಾರಿ ಆದೇಶ

೨) ದಿನಾಂಕ: ೦೪.೦೮.೨೦೦೪ ಮಾಲೂರಿನ ಶ್ರೀ ವೆಂಕಟೇಶ್ವರ ಎಜುಕೇಶನಲ್ ಟ್ರಸ್ಟ್‌ನ ಅಧ್ಯಕ್ಷರ ಪತ್ರ

೩) ದಿನಾಂಕ: ೧೪.೦೭.೨೦೦೪ ಸಂಖ್ಯೆ:ಎಸಿ:ಎನ್‌ಎಸ್-೧೮೫:೦-೧೫೫:೨೦೦೪-೦೫ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಛೇರಿ ಆದೇಶ

**ಪೀಠಿಕೆ:**

೧. ತಾ: ೧೨.೧೨.೨೦೦೩ರ ಸರ್ಕಾರಿ ಆದೇಶದಲ್ಲಿ ಮಾಲೂರಿನ ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ನರ್ಸಿಂಗ್‌ಗೆ ೫೦ ವಿದ್ಯಾರ್ಥಿಗಳ ಪ್ರವೇಶಮಿತಿಯ ಬಿಎಸ್ಸಿ ನರ್ಸಿಂಗ್ ಕೋರ್ಸ್‌ನೊಂದಿಗೆ ಕೆಲವುಷರತ್ತಿಗೊಳಪಡಿಸಿ ೧೯೯೪ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ ೪೫ನೇ ಪ್ರಕರಣದ (೫)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ೨೦೦೩-೦೪ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿತ್ತು .

೨. ಶ್ರೀ ವೆಂಕಟೇಶ್ವರ ಎಜುಕೇಶನಲ್ ಟ್ರಸ್ಟ್‌ನ ಪತ್ರದಲ್ಲಿ ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ನರ್ಸಿಂಗ್ ಹೆಸರನ್ನು ಮಾನಸ ನರ್ಸಿಂಗ್ ಕಾಲೇಜ್ ಎಂದು ಬದಲಾಯಿಸಲು ಠರಾವು ಪಾಸು ಮಾಡಿರುವುದಾಗಿ ತಿಳಿಸಿ ನರ್ಸಿಂಗ್ ಕಾಲೇಜಿನ ಹೆಸರನ್ನು ಮಾನಸ ನರ್ಸಿಂಗ್ ಕಾಲೇಜ್ ಎಂದು ಪ್ರತಿಸ್ಥಾಪಿಸಲು ಕೋರಿದ್ದಾರೆ.

## ಸರ್ಕಾರಿ ಆದೇಶ ಸಂಖ್ಯೆ: ಆಕುಕ 523 ಎಂಪಿಎಸ್ 2004

## ಬೆಂಗಳೂರು, ದಿನಾಂಕ: 15.09.2004

೩. ತಾ : 12.12.2003 ಸಂಖ್ಯೆ: ಆಕುಕ 388 ಎಂಪಿಎಸ್ 2003 ರ ಸರ್ಕಾರಿ ಆದೇಶವನ್ನು ಭಾಗಶ: ಮಾರ್ಪಡಿಸಿ ಮಾಲೂರಿನ " ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ನರ್ಸಿಂಗ್‌ನ್ನು " " ಮಾನಸ ನರ್ಸಿಂಗ್ ಕಾಲೇಜ್ " ಎಂದು ಬದಲಾಯಿಸಲು ಅನುಮತಿಸಲಾಗಿದೆ.

ಪು .ತಿ .ನೋ

೪. ತಾ: 12.12.2003ರ ಸರ್ಕಾರಿ ಆದೇಶದಲ್ಲಿನ ಇವರ ಎಲ್ಲಾ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/6/04
(ಕೆ.ಎ. ನಂಜುಂಡೇಗೌಡ)
ಸರ್ಕಾರದ ಉಪ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ ಬೆಂಗಳೂರು-೫೬೦ ೦೦೯

೨) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು-೫೬೦೦೦೯.

೩) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ೪ನೇ ಟಿ ಬ್ಲಾಕ್ ಜಯನಗರ , ಬೆಂಗಳೂರು-೫೬೦೦೪೧

೪) ರಿಜಿಸ್ಟ್ರಾರ್ ಭಾರತೀಯ ನರ್ಸಿಂಗ್ ಪರಿಷತ್ ಕೋಟ್ಲ ರಸ್ತೆ, ನವದೆಹಲಿ-೧೧೦ ೦೦೧

೫) ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ಸೂರಿ ಅಪಾರ್ಟ್‌ಮೆಂಟ್, ನಂ.೭೧, ೬ನೇ ಎ-ಕ್ರಾಸ್, ಆನಂದರಾವ್ ಬಡಾವಣೆ, ಗಾಂಧಿನಗರ, ಬೆಂಗಳೂರು- ೫೬೦೦೦೯

೬) ಅಧ್ಯಕ್ಷರು ಃ ಕಾರ್ಯದರ್ಶಿ, ಶ್ರೀ ವೆಂಕಟೇಶ್ವರ ಎಜುಕೇಷನ್ ಟ್ರಸ್ಟ್(ರಿ)ಮಾನಸ ಆಸ್ಪತ್ರೆ, ಅರಳೇರಿ ರಸ್ತೆ , ಮಾಲೂರು- ೫೬೩ ೧೩೦

೭) ಪ್ರಾಂಶುಪಾಲರು, ವೆಂಕಟೇಶ್ವರ ನರ್ಸಿಂಗ್ ಕಾಲೇಜ್, ಸುಮ ನರ್ಸಿಂಗ್‌ಹೋಂ, ಬಸ್‌ಸ್ಟ್ಯಾಂಡ್ ಎದುರು , ಮಾಲೂರು - ೫೬೩೧೩೦

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಾನಸ ನರ್ಸಿಂಗ್ ಶಾಲೆ : ಕಾಲೇಜು ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯ ನೀಡುವ ಬಗ್ಗೆ.

ಓದಲಾಗಿದೆ :

1) ಸರ್ಕಾರದ ಆದೇಶ ಸಂಖ್ಯೆ :ಆಕುಕ 290 ಎಂಎಂಇ 2003. ದಿನಾಂಕ:15-12-2003.
2) ಸರ್ಕಾರದ ಆದೇಶ ಸಂಖ್ಯೆ :ಆಕುಕ 388 ಎಂಇಎಸ್ 2003. ದಿನಾಂಕ:12-12-2003.
3) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಮಾನಸ ನರ್ಸಿಂಗ್ ಶಾಲೆ:ಕಾಲೇಜು ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸಂಖ್ಯೆ:ಎಂಡಿಪಿ(ಕ್ಲಿ)/23/07-08 ದಿ:27-6-07.

* *

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಆದೇಶದಲ್ಲಿನ ಮಾನಸ ನರ್ಸಿಂಗ್ ಶಾಲೆ : ಕಾಲೇಜು, ಮಾಲೂರು ಇವರಿಗೆ ಮಾನ್ಯತೆ ನೀಡಿ ಆದೇಶ ಹೊರಡಿಸಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2) ರಲ್ಲಿನ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮಾನಸ ನರ್ಸಿಂಗ್ ಶಾಲೆ : ಕಾಲೇಜು ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯ ನೀಡಲು ಇವರ ವಿದ್ಯಾರ್ಥಿಗಳಿಗೆ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿ ಕ್ಲಿನಿಕಲ್ ಸೌಲಭ್ಯ ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 527 ಸಿಜಿಎಂ 2007, ಬೆಂಗಳೂರು, ದಿನಾಂಕ:18-8-07**

ನಿರ್ದೇಶಕರ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಮಾನಸ ನರ್ಸಿಂಗ್ ಶಾಲೆ : ಕಾಲೇಜು ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯ ನೀಡಲು ಇವರ ವಿದ್ಯಾರ್ಥಿಗಳಿಗೆ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕ್ಲಿನಿಕಲ್ ಸೌಲಭ್ಯವನ್ನು ಒದಗಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ನೀಡಲಾಗಿರುವ ಕ್ಲಿನಿಕಲ್ ಸೌಲಭ್ಯದ ಅವಧಿಯು ಐದು ವರ್ಷಗಳಿಗೆ ಮಾತ್ರ ಸೀಮಿತವಾಗಿರುತ್ತದೆ.
2. ಪ್ರಸ್ತುತ ವರ್ಷದಲ್ಲಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಾಸಿಗೆಗಳನ್ನು ಗುರುತಿಸಿಕೊಂಡ ನಂತರವೇ ಸಂಸ್ಥೆಯ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯ ನೀಡತಕ್ಕದ್ದು. ತಪ್ಪಿದ್ದಲ್ಲಿ ಸಂಬಂಧಿಸಿದ ವೈದ್ಯಾಧಿಕಾರಿಗಳು ಹೊಣೆಗಾರರಾಗಿರುತ್ತಾರೆ.

3. ಕ್ಲಿನಿಕಲ್ ಸೌಲಭ್ಯ ನೀಡಿದ ಅವಧಿಯಲ್ಲಿ ವಿದ್ಯಾರ್ಥಿಗಳಿಂದ ಸಾರ್ವಜನಿಕ ಆಸ್ಪತ್ರೆಗೆ ನಷ್ಟ ಉಂಟಾದಲ್ಲಿ ಈ ನಷ್ಟವನ್ನು ಸದರಿ ಸಂಸ್ಥೆಯವರೇ ಭರಿಸತಕ್ಕದ್ದು.
4. ಸರ್ಕಾರಿ ಆದೇಶವನ್ನು ಹೊರಡಿಸಿದ ಮೂರು ತಿಂಗಳೊಳಗಾಗಿ ಕ್ಲಿನಿಕಲ್ ಸೌಲಭ್ಯವನ್ನು ಉಪಯೋಗಿಸಿಕೊಳ್ಳದೇ ಹೋದಲ್ಲಿ ಅಂತಹ ಆದೇಶವನ್ನು ರದ್ದುಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಆರ್.ಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
2. ನಿದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಕೋಲಾರ ಜಿಲ್ಲೆ.
4. ಪ್ರಾಂಶುಪಾಲರು, ಮಾನಸ ನರ್ಸಿಂಗ್ ಶಾಲೆ, ಮಾನಸ ಆಸ್ಪತ್ರೆ, ಅರಳೇರಿ ರಸ್ತೆ, ಮಾಲೂರು-563130
5. ಆಡಳಿತ ವೈದ್ಯಾಧಿಕಾರಿಗಳು, ಮಾಲೂರು. ಕೋಲಾರ ಜಿಲ್ಲೆ.
6. ಶಾಖಾ ರಕ್ಷಕ ಕಡತ.